Date : 25-9-2015

# ಮಲೇಶಿಯಾ ಮತ್ತು ಇಂಡೋನೇಶಿಯಾಗಳಲ್ಲಿ ಪಾಮೆಣ್ಣೆ ಉತ್ಪಾದನೆ ಎಲ್ ನೀನೋ ಭಯದ ನೆರಳಿನಲ್ಲಿ

ಪ್ರಬಲ ಎಲ್ ನೀನೋ ಪರಿಣಾಮದ ಬರ ಈ ವರ್ಷ ಪ್ರಾರಂಭವಾಗಿ ಮುಂದಿನ ಎಪ್ರಿಲ್ ತಿಂಗಳ ತನಕ ಮಲೇಶಿಯಾ ಮತ್ತು ಇಂಡೋನೇಶಿಯಾಗಳಲ್ಲಿ ಪಾಮ್ ಉತ್ಪಾದನೆಯ ಮೇಲೆ ಪ್ರಭಾವ ಬೀರುವ ನಿರೀಕ್ಷೆಯಿದೆ. ಇದರಿಂದ ಮುಂದಿನ ವರ್ಷದಲ್ಲಿ ಪಾಮೆಣ್ಣೆ ಉತ್ಪಾದನೆಗೆ ಪ್ರಬಲ ಹೊಡೆತ ಬೀಳುವ ಸಂಭವವಿದೆಯೆನ್ನಲಾಗಿದೆ. ಈ ಹಿಂದೆ 2009 ಮತ್ತು 2010ರಲ್ಲಿ ಎಲ್‌ನೀನೋ ಪ್ರಭಾವದಿಂದ ಪಾಮೆಣ್ಣೆ ಉತ್ಪಾದನೆ ಗಣನೀಯ ಇಳಿಕೆ ಕಂಡಿತ್ತು. ಈ ವರ್ಷ ಎಲ್ಲಾ ಸೂಚನೆಗಳು 1982, 1983, ಮತ್ತು 1997, 1998ರ ಸಮನಾದ ಪ್ರಬಲ ಅಸಾಮಾನ್ಯ ಎಲ್‌ನೀನೋ ಹವಾಮಾನದ ಸಂಭವವನ್ನು ಸೂಚಿಸುತ್ತಿವೆ. ಇದು 2016ರಲ್ಲಿ ಇಂಡೋನೇಶಿ ಮತ್ತು ಮಲೇಶಿಯಾಗಳ ಪಾಮೆಣ್ಣೆ ಪೂರೈಕೆಯ ಮೇಲೆ ಪ್ರಬಲ ಹೊಡೆತ ಬೀಳಲು ಕಾರಣವಾಗಬಹುದೆನ್ನಲಾಗಿದೆ. ಈ ಹಿಂದಿನ ಎಲ್‌ನೀನೋ ಪ್ರಭಾವಗಳಲ್ಲಿ ಪಾಮ್ ಉತ್ಪಾದನೆ 2 ಶೆಕಡಾದಿಂದ 23 ಶೇಕಡಾವರೆಗೆ ಕಡಿಮೆಯಾಗಿತ್ತು. ಈ ಹಿಂದಿನ ಇತಿಹಾಸಗಳಲ್ಲಿ ಎಲ್‌ನೀನೋ ಪ್ರಭಾವ 2009 ಮತ್ತು 2010ರಲ್ಲಿ 15 ಶೇಕಡದಿಂದ 125 ಶೇಕಡಾವರೆಗೆ ಪಾಮೆಣ್ಣೆ ಪೂರೈಕೆಯಲ್ಲಿ ವ್ಯತ್ಯಯ ಉಂಟುಮಾಡಿತ್ತು. 1997, 1998ರಲ್ಲಿ ಎಲ್‌ನೀನೋ ಪ್ರಭಾವದಿಂದ ಪಾಮೆಣ್ಣೆ ದರ ತಿಂಗಳುಗಳ ಮಾಪನದಲ್ಲಿ 80 ಶೇಕಾಡದಿಂದ 110 ಶೇಕಡಾವರೆಗೆ ಹೆಚ್ಚಳವಾಗಿತ್ತು. ಆದರೆ 2015ರ ಉತ್ಪಾದನೆ ಭಾಧಿತವಾಗಲಾರದೆನ್ನಲಾಗಿದೆ. ಎಲ್‌ನೀನೋ ಪ್ರಭಾವ ಅತಿ ಪ್ರಬಲವಾಗಿಲ್ಲವಾದರೆ, ಜಾಗತಿಕ ವಿಫುಲ ಸೋಯಾಬೀನ್ ಪೂರೈಕೆ ಪಾಮೆಣ್ಣೆಯ ದರ ಹೆಚ್ಚಳಕ್ಕೆ ತಡೆಯಾಗಬಹುದೆನ್ನಲಾಗಿದೆ. ಪ್ರಭಾವ ಅತೀ ಪ್ರಬಲವಾಗಿ ತೈಲ ಬೀಜಗಳ ಪೂರೈಕೆ ಇಳಿಕೆಯಾದರೆ ಮಾತ್ರ ದರ ಗಣನೀಯ ಹೆಚ್ಚಳವಾಗಬಹುದೆನ್ನಲಾಗಿದೆ. ಹಿಂದಿನ ಅನುಭವಗಳ ಪ್ರಕಾರ ಎಲ್‌ನೀನೋ ಪ್ರಭಾವದ ನಂತರ ದರ 13 ಶೇಕಡಾದಿಂದ 40 ಶೇಕಡಾ ಹೆಚ್ಚಳವಾಗಬಹುದೆಂದು ಪರಿಣತರ ಅನಿಸಿಕೆಯಾಗಿದೆ. ಪಾಮ್ ಎಸ್ಟೇಟ್‌ಗಳಲ್ಲಿ ಪ್ರಬಲ ಬರ ಪರಿಸ್ಥಿತಿ ಪಾಮ್ ಬೆಳೆ ಮತ್ತು ತೈಲಪ್ರಮಾಣದ ಮೇಲೆ ಋಣಾತ್ಮಕ ಪರಿಣಾಮ ಬೀರುತ್ತದೆ. ಆದರೆ ಪ್ರಭಾವ ಕೂಡಲೇ ಕಾಣದೆ 6 ತಿಂಗಳ ನಂತರ 2 ವರ್ಷಗಳ ತನಕ ಕಾಡಬಹುದಾಗಿದೆ. ಬಯೋಡೀಸೆಲ್ ಉತ್ಪಾದನೆಗೆ ಸಸ್ಯಜನ್ಯ ಖಾದ್ಯತೈಲಗಳ ಬೇಡಿಕೆ ಕಡಿಮೆಯಾಗಿದ್ದು, ಖಾದ್ಯತೈಲಗಳ ಸಾಕಷ್ಟು ಬಫರ್‌ದಾಸ್ತಾನು ಇರುವುದರಿಂದ ಎಲ್‌ನೀನೋ ನಿರೀಕ್ಷೆಯ ಸುದ್ಧಿಯಾಗಿದ್ದರೂ ಈ ವರೆಗೆ ಕಚ್ಚಾ ಪಾಮೆಣ್ಣೆಯ ದರ ಹೆಚ್ಚಿನ ಏರಿಕೆಯಾಗಿಲ್ಲ.